<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆಃ 207/2024**

**ಸಾಕ್ಷಿಯನ್ನು ದಿಃ 29.07.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಪವಿತ್ರ | ಸಿಡಬ್ಲ್ಯೂ 1 | ಪಿಡಬ್ಲ್ಯೂಃ 2 |
| ಗಂಡನ ಹೆಸರು | ಮಾರ್ಕಂಡಯ್ಯ | | |
| ವಯಸ್ಸು | 30 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಕಲ್ಲುಣಿಕೆ | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

ಚಾಸಾ-2 ನನ್ನ ಗಂಡ. ಚಾಸಾ-3 ರಿಂದ 6 ರವರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಸಾಕ್ಷಿ ದೂರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಸ್ಥಳ ಮಹಜರಿನಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-2 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ. ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿದ್ದೇನೆ. ದಿಃ 18.01.2024 ರಂದು ಕುಮಾರಸ್ವಾಮಿ ಎಂಬ ಹುಡುಗ ನನ್ನನ್ನು ನೋಡುವುದು ಗುರಾಯಿಸುವುದು ಮಾಡುತ್ತಿದ್ದ. ಆ ಕಾರಣದಿಂದ ಅದನ್ನು ನನ್ನ ಗಂಡನಿಗೆ ಹೇಳಿದ್ದೆ. ಅವರು ಮರುದಿನ ಹೋಗಿ ದೂರು ಕೊಡೋಣ ಎಂದು ಹೇಳಿದರು. ಆ ಪ್ರಕಾರ ದಿಃ 19.01.2024 ರಂದು ನಾನು ಮತ್ತು ಚಾಸಾ-2 ರವರು ಸಂಜೆ 4 ಗಂಟೆಗೆ ದೂರು ಕೊಡಲು ಹೋಗುತ್ತಿದ್ದಾಗ ಕುಮಾರಸ್ವಾಮಿ ನಮ್ಮ ಮನೆಯ ಮುಂದುಗಡೆ ಬಂದು, ಸೂಳೆ ಮುಂಡೆ, ಲೋಫರ್ ಮುಂಡೆ ಎಂದು ನನಗೆ ಅವಾಚ್ಯ ಶಬ್ದಗಳಿಂದ ಬೈದ. ಆತ ನನ್ನ ಮನೆಯ ಒಳಗೆ ನುಗ್ಗಿ ನನ್ನ ನೈಟಿಯ ಮುಂಭಾಗ ಎಳೆದ. ನನ್ನನ್ನು ನಮ್ಮ ಮನೆಯ ಮುಂದಿನ ಖಾಲಿ ಜಾಗಕ್ಕೆ ಕೆಡವಿದ. ನನಗೆ ಕಾಲಿನಿಂದ ಒದ್ದ. ಆಗ ಕುಮಾರ ಸ್ವಾಮಿ ಮತ್ತು ಆರೋಪಿ ನನ್ನ ನೈಟಿಯನ್ನು ಎಳೆದರು. ಆರೋಪಿ ನನ್ನನ್ನು ಕೆಡವಿ ಕಾಲಿನಿಂದ ಹೊಡೆದು

ನೋವುಂಟು ಮಾಡಿದರು. ಅಷ್ಟರಲ್ಲಿ ಚಾಸಾ–2 ರವರು ಬಂದರು. ಜಗಳ ಬಿಡಿಸಲು ಪ್ರಯತ್ನಿಸಿದರು. ಆಗ ಆರೋಪಿ ಚಾಸಾ–2 ರವರ ತುಟಿಗೆ ಮೈಕೈಗೆ ಹೊಡೆದ. ಚಾಸಾ–3 ಮತ್ತು 4 ರವರು ಬಂದು ಜಗಳ ಬಿಡಿಸಿದರು. ನಮಗೆ ಜಾಸ್ತಿ ನೋವಾಗಿದ್ದರಿಂದ ಆಟೋದಲ್ಲಿ ನಾನು ಮತ್ತು ಚಾಸಾ–2 ರವರು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಹೋದೆವು. ನಾನು ಅಲ್ಲಿ ಇದ್ದಾಗ ರಾತ್ರಿ 9 ಗಂಟೆಗೆ ಪೋಲಿಸರು ಬಂದರು. ಅಲ್ಲಿ ನನ್ನ ಹೇಳಿಕೆಯನ್ನು ಪಡೆದುಕೊಂಡರು ಅದು ನಿಪಿ–1 ಆಗಿದೆ. ನನ್ನ ಹೇಳಿಕೆಯನ್ನು ಪಡೆದು ಸಹಿ ಹಾಕಿಸಿಕೊಂಡರು.

ದಿಃ 22.01.2024 ರಂದು ಪೋಲಿಸರು ನಮ್ಮ ಮನೆಯ ಹತ್ತಿರ ಸಂಜೆ 5 ಗಂಟೆಗೆ ಬಂದರು. ನಾನು ಹಾಜರಿದ್ದು ಸ್ಥಳ ತೋರಿಸಿದೆ. ಆಗ ಚಾಸಾ–5 ಮತ್ತು 6 ರವರು ಹಾಜರಿದ್ದರು. ಮಹಜರು ಸಮಯದಲ್ಲಿ ಒಂದು ಶರ್ಟ್ ಮತ್ತು ನೈಟಿಯನ್ನು ನಾನು ಹಾಜರುಪಡಿಸಿದೆ. ಅದನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡರು. ಮಹಜರನ್ನು ಸಜೆ 5 ರಿಂದ 6 ಗಂಟೆಯವರೆಗೆ ಮಾಡಿದ್ದಾರೆ. ಮಹಜರಿನಲ್ಲಿ ಬರೆದ ವಿಚಾರಗಳು ಗೊತ್ತಿದೆ. ಮಹಜರು ಮೂಲಕ ವಶಪಡಿಸಿಕೊಂಡ ಶರ್ಟ್ ಮತ್ತು ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮು.ಮಾ–1 ರ ಶರ್ಟ್ ನ್ನು ನೋಡಿ ಗುರುತಿಸಿದ್ದು, ನೈಟಿಯನ್ನು ನೋಡಿ ಗುರುತಿಸಿದ್ದರಿಂದ ಮು.ಮಾ–2 ಎಂದು ಗುರುತಿಸಲಾಯಿತು. ಮಹಜರು ಆದ ನಂತರ ಠಾಣೆಗೆ ಹೋದೆ. ಅಲ್ಲಿ ಹೇಳಿಕೆಯನ್ನು ನೀಡಿದ್ದೇನೆ. ನಂತರ ನಾನು ನ್ಯಾಯಾಧೀಶರ ಮುಂದೆ ದಿಃ 01.03.2024 ರಂದು ಹಾಜರಾಗಿ ಹೇಳಿಕೆ ನೀಡಿದ್ದೇನೆ. ***(ಸೀಲ್ ಮಾಡಲಾದ ಕವರಿನಲ್ಲಿರುವ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಸಾಕ್ಷಿಗೆ ತೋರಿಸಲಾಯಿತು.)*** ಸದರಿ ಹೇಳಿಕೆಯನ್ನು ಈಗ ನೋಡುತ್ತಿದ್ದು, ನಿಪಿ–3 ಎಂದು ಸಾಕ್ಷಿ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಹೆಚ್.ಕೆ ವಕೀಲರಿಂದಃ**

ನಾವು ಕಳೆದ 12 ವರ್ಷಗಳಿಂದ ಅಲ್ಲಿ ವಾಸವಿದ್ದೇವೆ. ನನಗೆ ಇಬ್ಬರು ಮಕ್ಕಳು. ಅವರು ಶಾಲೆಗೆ ಹೋಗುತ್ತಿದ್ದಾರೆ. ನಮ್ಮ ಮನೆಯ ಎರಡೂ ಬದಿಗಳಲ್ಲಿ ತುಂಬಾ ವಾಸದ ಮನೆಗಳು ಇವೆ ಎಂದರೆ ಸರಿ. ನಮ್ಮ ಮನೆಗೂ ಆರೋಪಿಯ ಮನೆಗೂ ಸುಮಾರು 10 ರಿಂದ 15

ಮೀಟರ್ ದೂರ ಇರಬಹುದು. ನಮ್ಮ ಮನೆಯ ಎರಡೂ ಬದಿಗಳಲ್ಲಿ ಸುಮಾರು 30 ವಾಸದ ಮನೆಗಳಿವೆ. ನಾವು ಅಕ್ಕ-ಪಕ್ಕದ ಮನೆಯವರ ಜೊತೆ ಅನ್ಯೋನ್ಯತೆಯಿಂದ ಇದ್ದೆವು. ನಮ್ಮ ಮನೆಯಿಂದಆರೋಪಿಯ ಮನೆಯ ಕಡೆ ನೋಡಿದರೆ ಅಥವಾ ಅವರ ಮನೆಯ ಕಡೆಯಿಂದ ನಮ್ಮ ಮನೆಯ ಕಡೆ ನೋಡಿದರೆ ಏನೇನು ಆಗುತ್ತಿದೆ ಎಂದು ಹೇಳಲಾಗುವುದಿಲ್ಲ. ದಿಃ 19.01.2024 ರಂದು ಸಂಜೆ 5 ಗಂಟೆಗೆ ಆಸ್ಪತ್ರೆಗೆ ಹೋಗಿ ದಾಖಲಾಗಿದ್ದೆ. ದಿಃ 24.01.2024 ರಂದು ಡಿಸ್ಚಾರ್ಜ್ ಆದೆ. ದಿಃ 24.01.2024 ರಂದು ಸಂಜೆ 7 ಗಂಟೆಗೆ ಡಿಸ್ಚಾರ್ಜ್ ಆದೆ. ಮೊದಲ ಬಾರಿಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಗೊತ್ತಿಲ್ಲ. ದಿಃ 24.01.2024ರವರೆಗೆ ಆಸ್ಪತ್ರೆಯಲ್ಲಿ ನನ್ನನ್ನು ನೋಡಿಕೊಳ್ಳಲು ಚಾಸಾ-2 ಇದ್ದರು. ಬೇರೆ ಯಾರು ಇರಲಿಲ್ಲ. ದಿಃ 18.01.2024 ರಂದು ಕುಮಾರಸ್ವಾಮಿ ಒಬ್ಬರೇ ನನ್ನ ಮೇಲೆ ಹಲ್ಲೆ ಮಾಡಿದ್ದರು ಎಂದರೆ ಇಬ್ಬರೂ ಹಲ್ಲೆ ಮಾಡಿದ್ದರು. ದಿಃ 18.01.2024 ರಂದು ನಾನು ಮತ್ತು ನನ್ನ ಗಂಡ ದೂರು ಕೊಡಲು ರಾತ್ರಿ 7-00 ಗಂಟೆಗೆ ಹೋದೆವು.

ದಿಃ 18.01.2024 ರಂದು ರಾತ್ರಿ 10-00 ಗಂಟೆಗೆ ಈ ಘಟನೆ ಕುರಿತಂತೆ ನಾನು ಮತ್ತು ಚಾಸಾ-2 ಪೋಲಿಸ್ ಠಾಣೆಗೆ ಹೋದೆವು. ದೂರು ಕೊಡಲು ಹೋದಾಗ ಠಾಣೆಯಲ್ಲಿ ಯಾರು ಇದ್ದರು ಎಂದು ಹೆಸರು ಗೊತ್ತಿಲ್ಲ. ಪೋಲಿಸರು ದೂರನ್ನು ದಾಖಲಿಸಿಕೊಂಡರು. ನನಗೆ ಬೆಳಿಗ್ಗೆ 7-00 ಗಂಟೆಗೆ ಕುಮಾರ ಸ್ವಾಮಿ ನನ್ನನ್ನು ನೋಡಿದ. ನಮ್ಮ ಮನೆಯ ಎದುರುಗಡೆಯಿಂದ ಹೋಗುತ್ತಿದ್ದಾಗ ನೋಡಿಕೊಂಡು ಹೋದ. ಆಗ ಕುಮಾರ ಸ್ವಾಮಿ ನನ್ನ ಮುಖಕ್ಕೆ ಹುಗಿದ ಕಾರಣ ನಾನು ಅವನಿಗೆ ಬೈದೆ. ಆತ ಬೈಸಿಕೊಂಡು ಹೋದ. ಆ ದಿನ ಅವರು ನಮ್ಮ ಮನೆಯ ಕಡೆ ಬಂದಿಲ್ಲ ಎಂದರೆ ನಾನು ನೋಡಿಲ್ಲ. ದಿಃ 18.01.2024 ರಂದು ದೂರು ದಾಖಲಾದ ನಂತರ ದಿಃ 22.01.2024 ರಂದು ಪೋಲಿಸರು ಮನೆಯ ಹತ್ತಿರ ಸಂಜೆ 5 ಗಂಟೆಗೆ ಬಂದರು. ನನ್ನ ಗಂಡ ಬೆಳಿಗ್ಗೆ 6 ಗಂಟೆಗೆ ಕೆಲಸಕ್ಕೆ ಹೋದರೆ ಸಂಜೆ 6 ಗಂಟೆಗೆ ಬರುತ್ತಾರೆ. ಭಾನುವಾರ ಅವರಿಗೆ ರಜಾ ಇರುತ್ತದೆ. ನನ್ನ ಗಂಡ ಕೆಲಸದಿಂದ ಬಂದ ನಂತರ ನಾನು ಘಟನೆಯ ಬಗ್ಗೆ ಹೇಳಿದೆ. ಮರುದಿನ ನನ್ನ ಗಂಡ ಸಂಜೆ 4 ಗಂಟೆಗೆ ಕೆಲಸದಿಂದ ಬಂದರು. ಸಾಮಾನ್ಯವಾಗಿ ನನ್ನ ಗಂಡ ಕೆಲಸದಿಂದ ಬ್ಬದ ನಂತರ ಬಟ್ಟೆ ಬದಲಾಯಿಸಿ ಕೈಕಾಲು ಮುಖ ತೊಳೆಯುವುದು ವಾಡಿಕೆ ಎಂದರೆ ಆ ದಿನ ನೇರವಾಗಿ ಠಾಣೆಗೆ ಹೋಗಲು ಹೊರಟರು. ಸಂಜೆ 4-20 ಕ್ಕೆ ಬೈಕ್ ನಲ್ಲಿ ಹೊರಟರು.

ನಾನು ಅವರ ಜೊತೆ ಹೋದೆ. ನಾವು ದೂರು ಕೊಡಲು ಹೋಗುತ್ತಿದ್ದಾಗ ಜಗಳವಾಯಿತು. ದೂರು ನೀಡಲು ಹೋಗುತ್ತಿರುವ ವಿಚಾರ ನಮ್ಮನ್ನು ಹೊರತುಪಡಿಸಿ ಬೇರೆ ಯಾರಿಗೂ ಗೊತ್ತಿಲ್ಲ ಎಂದರೆ ಚಾಸಾ–2 ರವರು ದೊಡ್ಡಪ್ಪನ ಮಕ್ಕಳಿಗೆ ಹೇಳಿದ್ದರು. ಅವರು ಚಾಸಾ–3 ಮತ್ತು ಮಹದೇವ. ನಾವು ಠಾಣೆಗೆ ಹೋಗುತ್ತಿರುವ ವಿಷಯ ಆರೋಪಿತರಿಗೆ ಗೊತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. 4–20 ಕ್ಕೆ ಆರೋಪಿ ಮತ್ತು ಕುಮಾರಸ್ವಾಮಿ ನಮ್ಮ ಮನೆಯ ಒಳಗೆ ನುಗ್ಗಿದರು. ಕುಮಾರಸ್ವಾಮಿ ಮೊದಲು ನುಗ್ಗಿದ. ಕುಮಾರಸ್ವಾಮಿ ಮೊದಲು ನನ್ನ ಮೇಲೆ ಹಲ್ಲೆ ಮಾಡಿದ. ಮನೆಯ ಹೊರಗೆ ನನಗೆ ಹಲ್ಲೆ ಮಾಡಿದ. ಮನೆಯ ಒಳಗೆ ಕೂಡ ಹಲ್ಲೆ ಮಾಡಿದ. ಕೈಯಿಂದ ಹಲ್ಲೆ ಮಾಡಿದ್ದಾರೆ ಎಂದು ಹೇಳಿದ ಕಾರಣ ನನಗೆ ರಕ್ತಗಾಯ ಆಗಲಿಲ್ಲ ಎಂದರೆ ಸರಿ. ನನ್ನ ಮುಂಭಾಗದಲ್ಲಿ ಹಿಡಿದುಕೊಂಡು ಎಳೆದುಕೊಂಡು ಬಂದ. ನಾನು ಕೆಂಪು ಬಣ್ಣದ ನೈಟಿ ಧರಿಸಿದ್ದೆ. ಮುಂಭಾಗದ ಎರಡೂ ಕಡೆ ನೈಟಿ ಹರಿಯಿತು. ಕುಮಾರಸ್ವಾಮಿ ಹಲ್ಲೆ ಮಾಡಿದ ನಂತರ ಆರೋಪಿ ಕಾಲಿನಿಂದ ಒದ್ದು ಕೈಯಿಂದ ಹೊಡೆದ. ಆ ಸಮಯ ನನ್ನ ಗಂಡ ಫೋನ್ ಬಂತು ಎಂದು ಎಲ್ಲೋ ಹೋಗಿದ್ದರು. ಜಗಳವಾಗುತ್ತಿದ್ದಾಗಲೇ ನನ್ನ ಗಂಡ ಬಂದರು. ಅವರು ಗಲಾಟೆಯನ್ನು ನೋಡಲಿಲ್ಲ ಎಂದರೆ ಅವರು ಇದ್ದಾಗಲೇ ಗಲಾಟೆ ನಡೆದಿದೆ.

ನಾನು ಹೇಳಿದಂತಹ ಘಟನೆ ನಡೆದರೇ ಏರು ಧ್ವನಿಯಲ್ಲಿ ಮಾತನಾಡುತ್ತಾರೆ ಮತ್ತು ಅದು ಅಕ್ಕ–ಪಕ್ಕದವರಿಗೆ ಕೇಳಿಸುತ್ತದೆ ಎಂದರೆ ಸರಿ. ಚಾಸಾ–3, 4 ಮತ್ತು ಇತರೇ ಸುಮಾರು ಜನರು ಬಂದರು. ಅವರ ಹೆಸರು ಹೇಳಲಾಗುತ್ತದೆಯೇ ಎಂದರೆ ಸರಿಯಾಗಿ ಗಮನಿಸಲಿಲ್ಲ. ತುಂಬಾ ಜನ ಬಂದರು ಎಂದು ಪೋಲಿಸರ ಮುಂದೆ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ಚಾಸಾ–3 ಮತ್ತು 4 ನನ್ನ ಸಂಬಂಧಿಕರು. ನಾನು ಹೇಳಿದಂತಹ ಘಟನೆ ನಡೆದಿದ್ದರೇ ಸುಮಾರು 50 ನಿಮಿಷದಿಂದ 1 ಗಂಟೆ ಬೇಕು ಎಂದರೆ ಸರಿ. ಘಟನೆ 4–20ಕ್ಕೆ ಪ್ರಾರಂಭವಾಗಿ 5–20ಕ್ಕೆ ಮುಗಿಯಿತು ಎಂದರೆ ಸರಿ. ನಮ್ಮ ಮನೆಯಿಂದ ಕಲ್ಕುಣಿಕೆ ಆಟೋ ಸ್ಟ್ಯಾಂಡ್ ಸುಮಾರು ಅರ್ಧ ಕಿ.ಮೀ ದೂರ ಇದೆ. ನನ್ನ ಬಾವನ ಮಗ ವಿನು ಆಟೋ ತರಿಸಿದ. ಎಷ್ಟು ನಿಮಿಷದಲ್ಲಿ ಆಟೊ ಬಂತು ಎಂದು ಹೇಳಲಾಗುವುದಿಲ್ಲ. ಸಂಜೆ 4–30 ಗಂಟೆ ಶಾಲೆ ಬಿಡುವ ಸಮಯ ಎಂದರೆ ಸರಿ. ಆ ಕಾರಣದಿಂದ ಹುಣಸೂರು ಪಟ್ಟಣದ ಎಲ್ಲಾ ರಸ್ತೆಗಳು ಹೆಚ್ಚಿನ ವಾಹನ ದಟ್ಟಣೆಯಿಂದ ಇರುತ್ತದೆ ಎಂದರೆ ಸರಿ. ನಾನು

ಮತ್ತು ನನ್ನ ಗಂಡ ನಮ್ಮ ಮನೆಯ ಹತ್ತಿರದಿಂದಲೇ ಆಟೋ ಹತ್ತಿಕೊಂಡೆವು. ಯಾವ ಮಾರ್ಗವಾಗಿ ಆಸ್ಪತ್ರೆಗೆ ಹೋದೆವು ಎಂದು ಗೊತ್ತಿಲ್ಲ. ಸಂಜೆ ಸುಮಾರು 5-30 ಗಂಟೆಗೆ ನಮ್ಮ ಮನೆಯಿಂದ ಆಸ್ಪತ್ರೆಗೆ ಹೊರಟೆವು. ಹೆಚ್ಚಿನ ವಾಹನ ದಟ್ಟನೆ ಇರುವ ಕಾರಣ ಮನೆಯಿಂದ ಆಸ್ಪತ್ರೆಗೆ ಹೋಗಲು 30 ನಿಮಿಷ ಬೇಕು. ನಾವು ಸಂಜೆ 6-00 ಗಂಟೆಗೆ ಆಸ್ಪತ್ರೆ ತಲುಪಿದೆವು. ವೈದ್ಯರು ಸುಮಾರು 7 ಗಂಟೆಗೆ ನಮ್ಮನ್ನು ಪರೀಕ್ಷಿಸಿದರು. ನನ್ನ ಗಂಡ ಒಂದು ದಿನಕ್ಕೆ ಡಿಸ್ಚಾರ್ಜ್ ಆದರು. ಮರುದಿನ ಮನೆಗೆ ಬಂದರು. ಮರುದಿನ ಎಷ್ಟು ಗಂಟೆಗೆ ಡಿಸ್ಚಾರ್ಜ್ ಆದರು ಎಂದು ಗೊತ್ತಿಲ್ಲ. ನಾನು ಆಸ್ಪತ್ರೆಯಲ್ಲಿದ್ದಾಗ ಪ್ರಥಮ ಚಿಕಿತ್ಸೆ ಕೊಟ್ಟ ನಂತರ ಪ್ರಜ್ಞೆ ಇತ್ತು. ನಾನು ಎಷ್ಟು ಗಂಟೆಗೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದೆ ಎಂದು ಗೊತ್ತಿಲ್ಲ. ನಾನು ಆಸ್ಪತ್ರೆಗೆ ದಾಖಲಾದ ನಂತರ 9-30 ಕ್ಕೆ ಪೋಲಿಸರು ಬಂದರು. ನನ್ನ ಹೇಳಿಕೆಯನ್ನು ಸುಮಾರು ಅರ್ಧಗಂಟೆ ದಾಖಲಿಸಿಕೊಂಡೆವು.

ದಿಃ 18.01.2024 ರಂದು ಹೇಳಿಕೆ ನೀಡಿದ್ದೇನೆ. ದಿಃ 22.01.2024 ರಂದು ಪೋಲಿಸರು ಸ್ಥಳಕ್ಕೆ ಬಂದರು. ನಾನು 24ನೇ ತಾರೀಖಿನಂದು ಡಿಸ್ಚಾರ್ಜ್ ಆದ ಕಾರಣ 22 ನೇ ತಾರೀಖಿನಂದು ಮನೆಯಲ್ಲಿ ಇರಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಳರೋಗಿಯಾಗಿ ಇದ್ದ ರೋಗಿಗಳನ್ನು ಮಧ್ಯದಲ್ಲಿ ಕಳುಹಿಸಿಕೊಡುವುದಿಲ್ಲ ಎಂದರೆ ಡಿಸ್ಚಾರ್ಜ್ ಆಗಿ ಪುನಃ ಅಡ್ಮಿಟ್ ಆಗಿದ್ದೇನೆ ಎಂದು ನುಡಿಯುತ್ತಾರೆ. ದಿಃ 22.01.2024 ರಂದು ರಾತ್ರಿ ಪುನಃ ಅಡ್ಮಿಟ್ ಆದೆ. ಈ ವಿಚಾರವನ್ನು ನಾನು ಈ ಹಿಂದೆ ಎಲ್ಲಿಯೂ ಹೇಳಿಲ್ಲ ಎಂದರೆ ಹೇಳಿದ್ದೇನೆ. ದಿಃ 22.01.2024 ರಂದು ಒಬ್ಬರು ಪೋಲಿಸರು ಬಂದಿದ್ದರು. ಅವರ ಹೆಸರು ಗೊತ್ತಿಲ್ಲ. ಬೇರೆ ಯಾರು ಬಂದಿರಲಿಲ್ಲ. ನಿಪಿ-2(ಎ) ಸಹಿಯನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿ. ಮುಮಾ-1 ನ್ನು ನಾನೇ ಪೋಲಿಸರಿಗೆ ಮನೆಯಲ್ಲಿ 5-30ಕ್ಕೆ ಕೊಟ್ಟಿದ್ದೇನೆ. ಚಾಸಾ-2 ರವರು ಶರ್ಟ್ , ತೋಳು ಮತ್ತು ಮುಂಭಾಗದಲ್ಲಿ ಹರಿದು ಹೋಯಿತು. ಬೇರೆ ಎಲ್ಲಿಯೂ ಹರಿದಿಲ್ಲ ಎಂದರೆ ಸರಿ. ಮುಮಾ-1 ರ ತೋಳು ಹರಿದಿಲ್ಲ ಎಂದರೆ ಸರಿ. ನನ್ನ ನೈಟಿಯ ಮುಂಭಾಗ ಹರಿದುಹೋಗಿಲ್ಲ ಎಂದರೆ ಸರಿಯಲ್ಲ. ಬೇರೆ ಎಲ್ಲಿಯೂ ಹರಿದಿಲ್ಲ.

ನಾನು ಪೋಲಿಸರ ಮತ್ತು ನ್ಯಾಯಾಧೀಶರ ಮುಂದೆ ಇಬ್ಬರೂ ಹೊಡೆದಿದ್ದಾರೆ ಎಂದು ಹೇಳಿಕೆ ನೀಡಿದ್ದೇನೆ. ಚಿಕಿತ್ಸೆ ಪಡೆದ ಬಗ್ಗೆ ದಾಖಲೆಯನ್ನು ಪೋಲಿಸರಿಗೆ ಕೊಟ್ಟಿಲ್ಲ. 4

ದಿನ ಅಡ್ಮಿಟ್ ಆಗಿದೆ ಎಂದು ಪೋಲಿಸರ ಮುಂದೆ ಹೇಳಿದ್ದೇನೆ. ದಿಃ 18.01.2024 ರಂದು ಕೊಟ್ಟಿದ್ದೇನೆ ಎಂದು ಹೇಳುವ ದೂರನ್ನು ಪೋಲಿಸರು ಬರೆದರು. ನಾನು ಹೇಳಿದಂತಹ ಯಾವುದೇ ಘಟನೆ ನಡೆದಿಲ್ಲ ಮತ್ತು ಆರೋಪಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮನೆಯ ಮುಂದೆ ಹಜಾರದಲ್ಲಿ ಮಹಜರು ಬರೆದರು. ಕೃತ್ಯ ನಡೆದ ಸ್ಥಳದ ಚೆಕ್ಕು ಬಂದಿ ಹೇಳಲಾಗುವುದಿಲ್ಲ. ನಿಪಿ–2(ಎ) ಸಹಿಯನ್ನು ಹೊರತುಪಡಿಸಿ ಈ ಘಟನೆಗೆ ಸಂಬಂಧಿಸಿದಂತೆ ಬೇರೆ ಯಾವುದೇ ಸಹಿ ಮಾಡಿಲ್ಲ ಎಂದರೆ ಮಾಡಿದ್ದೇನೆ. ನಾನು 4 ದಿನ ಅಡ್ಮಿಟ್ ಆಗಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ., ಹುಣಸೂರು.